12) ಹರಾಜು ಮಾಡಲಾದ ವಾಹನದ ಮೌಲ್ಯಕ್ಕೆ ನಿಯಮಾನುಸಾರ ವಾಹನವನ್ನು ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಚಾಲ್ತಿಯಲ್ಲಿರುವ ದರದ ಪ್ರಕಾರ ತೆರಿಗೆ ಮತ್ತು ಸೆಸ್‌ಗಳನ್ನು ಸಹ ಪಾವತಿ ಮಾಡಬೇಕು.
13) ಟೆಂಡರ್ ಹರಾಜಿನಲ್ಲಿ ಭಾಗವಹಿಸಿ ಯಶಸ್ವಿಯಾದ ಬಿಡ್‌ದಾರರ ತಪ್ಪು ಗ್ರಹಿಕೆಯಿಂದ ವಿವಾದ ಉಂಟಾಗಿ ಇಲಾಖೆಗೆ ನಷ್ಟವಾಗುವಂತಹ ಸಂದರ್ಭ ಉದ್ಭವಿಸಿದಲ್ಲಿ. ಅಂತಹ ಟೆಂಡರ್ / ಸವಾಲುದಾರರು ಮುಂಗಡವಾಗಿ ಕಟ್ಟಿದಲಾದ (ಇ.ಎಂ.ಡಿ) ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಅಂತಹವರ ವಿರುದ್ಧ ಕಾನೂನುಬದ್ಧವಾಗಿ ಕ್ರಮ ಕೈಗೊಳ್ಳಲಾಗುವುದು.
14) ಹರಾಜಿನ ಯಾವುದೇ ಟೆಂಡರ್ / ಸವಾಲನ್ನು ಯಾವುದೇ ಕಾರಣಕ್ಕಾಗಿ ರದ್ದುಪಡಿಸುವ / ತಿರಸ್ಕರಿಸುವ ಅಧಿಕಾರವನ್ನು ಪೊಲೀಸ್ ಅಧೀಕ್ಷಕರು, ಪಿ.ಡಿ.ಎಂ.ಎಸ್, ಯಲಹಂಕ, ಬೆಂಗಳೂರು ಇವರು ಹೊಂದಿರುತ್ತಾರೆ. ಇವರ ತೀರ್ಮಾನವೇ ಅಂತಿಮವಾದುದು.
15) ಮೇಲ್ಕಂಡ ಟೆಂಡರ್ / ಹರಾಜಿನ ಸಂಬಂಧದಲ್ಲಿ ಯಾವುದೇ ವಾದ ವಿವಾದಗಳು ಉದ್ಭವಿಸಿದಲ್ಲಿ, ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು ಇವರು ನೀಡುವ ತೀರ್ಮಾನವೇ ಅಂತಿಮವಾಗಿರುತ್ತದೆ.
16) ಹರಾಜು ಮಾಡಲಿರುವ ನಿರುಪಯುಕ್ತ ವಾಹನಗಳನ್ನು ಯಲಹಂಕದಲ್ಲಿರುವ ಪೊಲೀಸ್ ವಾಹನ ಚಾಲನಾ ಮತ್ತು ನಿರ್ವಹಣಾ ಶಾಲೆಯ ಆವರಣದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ. ಇಚ್ಛೆಯುಳ್ಳವರು ಕಛೇರಿ ವೇಳೆಯಲ್ಲಿ ಅಲ್ಲಿನ ಆರ್.ಪಿ.ಐ ರವರನ್ನು ಸಂಪರ್ಕಿಸಿ, ಪರಿಶೀಲನೆ ಮಾಡಿ ಹರಾಜಿನಲ್ಲಿ ಭಾಗವಹಿಸಿ ವಾಹನವನ್ನುಕೊಳ್ಳಬಹುದು.

ಟೆಂಡರ್ ಫಾರಂ ನ ನಮೂನೆ

ನಿರುಪಯುಕ್ತ ವಾಹನಗಳಿಗೆ ಟೆಂಡರ್

ಗೆ: ಪೊಲೀಸ್ ಅಧೀಕ್ಷಕರು,
ಪಿ.ಡಿ.ಎಂ.ಎಸ್, ಯಲಹಂಕ,
ಬೆಂಗಳೂರು–63.

ಮಾನ್ಯರೇ,

ತಮ್ಮ ಕಛೇರಿಯ ಅಧಿಸೂಚನೆ ಸಂಖ್ಯೆ:–– ತಾ:–––––––––––––––ರಲ್ಲಿ ತಿಳಿಸಿದ ಕ್ರಮಸಂಖ್ಯೆ––––––––––ರ––––––––––––––––––ನೊಂದಣಿ ಸಂಖ್ಯೆಯ ವಾಹನವನ್ನು ರೂ.–––––––––––––––––––––––ಗೆ (ಅಕ್ಷರಗಳಲ್ಲಿ ರೂಪಾಯಿ––––––––––––––––––––––––––––– –––) ಖರೀದಿಸಲು ಒಪ್ಪಿರುತ್ತೇನೆ.

ಸ್ಥಳ:
ತಾ:

ತಮ್ಮ ವಿಶ್ವಾಸಿ
ವಿಳಾಸ:

ಪೊಲೀಸ್ ಅಧೀಕ್ಷಕರು,
ಪಿ.ಡಿ.ಎಂ.ಎಸ್. ಯಲಹಂಕ, ಬೆಂಗಳೂರು.

ಪಿ.ಆರ್. 398

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
ಟೆಂಡರ್ ಅಧಿಸೂಚನೆ

ಸಂಖ್ಯೆ: ಸಿಆಸುಇ 212 ಡಿಟಿಎನ್ 2008, ಬೆಂಗಳೂರು, ದಿನಾಂಕ: 30ನೇ ಜೂನ್ 2008.

ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಚಿವರುಗಳ ಅಧಿಕೃತ ನಿವಾಸ ಮತ್ತು ಕಚೇರಿಗಳಲ್ಲಿರುವ ಈ ಕೆಳಕಂಡ ಮಾದರಿಯ ಕೀ ಟೆಲಿಫೋನ್ ಸಂಪರ್ಕ ವ್ಯವಸ್ಥೆಯನ್ನು ವಿಸ್ತಾರವಾದ ವಾರ್ಷಿಕ ಸೇವಾ ನಿರ್ವಹಣೆಗೆ ಒಳಪಡಿಸಲು ಸರ್ಕಾರವು ಉದ್ದೇಶಿಸಿದೆ. ಈ ಸಂಬಂಧ ಪ್ರಸಿದ್ಧ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ವಾರ್ಷಿಕ ಸೇವಾ ನಿರ್ವಹಣಾ ಗುತ್ತಿಗೆ ಅವಧಿಯು ಆದೇಶ ಹೊರಡಿಸುವ ದಿನಾಂಕದಿಂದ ಒಂದು ವರ್ಷದವರೆಗೆ ಇರುತ್ತದೆ.

ಕ್ರಮ ಸಂಖ್ಯೆ	ಮಾದರಿ	ಒಟ್ಟು ಎಕ್ಸ್‌ಟೆನ್‌ಷನ್	ಒಟ್ಟು ಸಂಪರ್ಕ ವ್ಯವಸ್ಥೆ ಸಂಖ್ಯೆ
1	ನಿಟ್‌ಸುಕೋ ಎನ್‌ಕೇ ನೈಸ್ 32–ಐ ಸೀರೀಸ್ ಡಿಜಿಟಲ್ ಕೀ ಟೆಲಿಫೋನ್ ಸಿಸ್ಟಂ ಮತ್ತು 14 ಡಿಜಿಟಲ್ ಡಿಸ್‌ಪ್ಲೇ ಕೆಟಿಎನ್ ಉಪಕರಣ	20 ಲೈನ್ಸ್ (14+6)	1 ನಂ.
2	ನಿಟ್‌ಸುಕೋ ಎನ್‌ಕೇ ನೈಸ್ 32–ಐ ಸೀರೀಸ್ ಡಿಜಿಟಲ್ ಕೀ ಟೆಲಿಫೋನ್ ಸಿಸ್ಟಂ ಮತ್ತು 18 ಡಿಜಿಟಲ್ ಡಿಸ್‌ಪ್ಲೇ ಕೆಟಿಎನ್ ಉಪಕರಣ	18 ಲೈನ್ಸ್	1 ನಂ.
3	ಪ್ಯಾನಾಸೋನಿಕ್ ಕೆಎಕ್ಸ್ ಟಿಎ:308 ಮಾದರಿ	(8+4) 12 ಲೈನ್ಸ್	2 ನಂ.
4	ಪ್ಯಾನಾಸೋನಿಕ್ ಕೆಎಕ್ಸ್ ಟಿಡಿ 308	(3+1) 4 ಲೈನ್ಸ್	23 ನಂ.

<u>ಟೆಂಡರ್‌ನ ಷರತ್ತುಗಳು ಈ ಕೆಳಕಂಡಂತಿವೆ:–</u>

1) ಮೊಹರು ಮಾಡಿರುವ ಟೆಂಡರ್‌ಗಳ ಲಕೋಟೆಯ ಮೇಲೆ "ಕೀ ಟೆಲಿಫೋನ್ / ಇಪಿಎಬಿಎಕ್ಸ್ ಸಂಪರ್ಕ ವ್ಯವಸ್ಥೆಯ ವಿಸ್ತಾರವಾದ ವಾರ್ಷಿಕ ಸೇವಾ ನಿರ್ವಹಣೆ ದರಪಟ್ಟಿ" ಎಂದು ಬರೆಯತಕ್ಕದ್ದು.

2) ವಾರ್ಷಿಕ ಸೇವಾ ನಿರ್ವಹಣೆ ವೆಚ್ಚದಿಂದ ಚಾಲ್ತಿಯಲ್ಲಿರುವ ಮಾರಾಟ ತೆರಿಗೆ ಮತ್ತು ಆದಾಯ ತೆರಿಗೆಯನ್ನು ಬಿಲ್ಲು ಮೊತ್ತದಿಂದ ಕಡಿತಗೊಳಿಸಲಾಗುವುದು.

3) ದರಪಟ್ಟಿ ನೀಡುವ ಸಂಸ್ಥೆಗಳು ಈ ಮೇಲ್ಕಂಡ ಉಪಕರಣಗಳ ದುರಸ್ಥಿಗೆ ಬೇಕಾಗುವ ಬಿಡಿ ಭಾಗಗಳ ದಾಸ್ತಾನಿನ ಬಗ್ಗೆ ಮಾಹಿತಿ ನೀಡಬೇಕು.

4) ವಿಸ್ತಾರವಾದ ವಾರ್ಷಿಕ ನಿರ್ವಹಣೆಗೆ (ಬಿಡಿ ಭಾಗಗಳ ವೆಚ್ಚವು ಸೇರಿದಂತೆ) ದರ ನಮೂದಿಸತಕ್ಕದ್ದು.

5) ಟೆಂಡರ್‌ನೊಂದಿಗೆ ದಿನಾಂಕ: 31–03–2008ಕ್ಕೆ ಅನ್ವಯಿಸುವ ಆದಾಯ ತೆರಿಗೆ ಮತ್ತು ಸೇವಾ ತೆರಿಗೆ ಪಾವತಿ ಮಾಡಿರುವ ಸರ್ಟಿಫಿಕೇಟ್ ಸಲ್ಲಿಸತಕ್ಕದ್ದು.

6) ಎಲ್ಲಾ ಸಂಪರ್ಕ ವ್ಯವಸ್ಥೆಗಳಿಗೂ **<u>ಒಟ್ಟಾಗಿ ಟೆಂಡರ್</u>** ಸಲ್ಲಿಸಬಹುದು ಅಥವಾ ಪ್ಯಾನಾಸೋನಿಕ್ ಮಾದರಿಯ ಕೀ ಟೆಲಿಫೋನ್ ಸಂಪರ್ಕ ವ್ಯವಸ್ಥೆಗೆ ಪ್ರತ್ಯೇಕವಾಗಿ ಟೆಂಡರ್ ಸಲ್ಲಿಸಬಹುದು. ಅದೇ ರೀತಿ "ನಿಟ್‌ಸುಕೋ ಎನ್‌ಕೆ ನೈಸ್ 32i" ಡಿಜಿಟಲ್ ಕೀ ಟೆಲಿಫೋನ್ ಸಂಪರ್ಕ ವ್ಯವಸ್ಥೆಗೆ ಪ್ರತ್ಯೇಕವಾಗಿ ಟೆಂಡರ್ ಸಲ್ಲಿಸಬಹುದಾಗಿದೆ.

7) ದೂರು ಬಂದಾಗ ದುರಸ್ಥಿಪಡಿಸುವುದಲ್ಲದೆ, ಕನಿಷ್ಠ ತಿಂಗಳಿಗೊಮ್ಮೆ ತಂತ್ರಜ್ಞರಿಂದ ನಿರೋಧಾತ್ಮಕ ನಿರ್ವಹಣೆ (ಪ್ರಿವೆಂಟಿವ್ ಮೆಂಟೇನೆನ್ಸ್) ಮಾಡಿಸತಕ್ಕದ್ದು.

8) ವಿಸ್ತಾರವಾದ ವಾರ್ಷಿಕ ಸೇವಾ ನಿರ್ವಹಣೆಯನ್ನು ವಹಿಸಿದಲ್ಲಿ ತೃಪ್ತಿಕರವಾಗಿ ಸರ್ವೀಸ್ ಮಾಡಿದ ನಂತರ ಪ್ರತಿ 6 ತಿಂಗಳಿಗೊಮ್ಮೆ 2 ಕಂತುಗಳಲ್ಲಿ ವಾರ್ಷಿಕ ಸೇವಾ ನಿರ್ವಹಣಾ ಮೊತ್ತವನ್ನು ಸಂದಾಯ ಮಾಡಲಾಗುವುದು.

9) ದರಪಟ್ಟಿಯೊಂದಿಗೆ ಠೇವಣಿ (ಇ.ಎಂ.ಡಿ) ಹಣ ರೂ. 10,000–00ಕ್ಕೆ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್‌ನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ), ವಿಧಾನಸೌಧ, ಬೆಂಗಳೂರು–1, ಇವರ ಹೆಸರಿಗೆ ಹೆಸರಿಸಿ ಲಗತ್ತಿಸತಕ್ಕದ್ದು. ರೂ. 10,000–00ಗಳ ಮೂಲ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್‌ನ್ನು ಲಗತ್ತಿಸಿರದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

10) ಅಯಶಸ್ವಿ ಟೆಂಡರ್‌ದಾರರ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್‌ನ್ನು ಹಿಂದಿರುಗಿಸಲಾಗುವುದು. ಅದಕ್ಕೆ ಯಾವುದೇ ರೀತಿಯ ಬಡ್ಡಿಯನ್ನು ನೀಡಲಾಗುವುದಿಲ್ಲ.

11) ಯಶಸ್ವಿ ಟೆಂಡರ್‌ದಾರರ ಇ.ಎಂ.ಡಿ ಮೊತ್ತವನ್ನು ವಾರ್ಷಿಕ ಅವಧಿ ಮುಗಿದ ನಂತರ ಅವರ ಕಾರ್ಯ ನಿರ್ವಹಣೆ ಬಗ್ಗೆ ಯಾವುದೇ ದೂರು ಇಲ್ಲದಿದ್ದಲ್ಲಿ ಹಾಗೂ ಷರತ್ತುಗಳ ಉಲ್ಲಂಘನೆ ಆಗಿರದಿದ್ದಲ್ಲಿ ಮಾತ್ರ ವಾಪಾಸು ಮಾಡಲಾಗುವುದು. ಇದಕ್ಕೆ ಯಾವುದೇ ರೀತಿಯ ಬಡ್ಡಿಯನ್ನು ನೀಡಲಾಗುವುದಿಲ್ಲ.

12) ಟೆಂಡರ್‌ಗಳನ್ನು ದಿನಾಂಕ: 30–07–2008ರಂದು ಮಧ್ಯಾಹ್ನ 3–00 ಗಂಟೆಯೊಳಗೆ ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಕಾರ್ಯಕಾರಿ), ಕೊಠಡಿ ಸಂಖ್ಯೆ: 23, ನೆಲಮಹಡಿ, ವಿಧಾನಸೌಧ, ಬೆಂಗಳೂರು–1, ಈ ಕಚೇರಿಗೆ ಸಲ್ಲಿಸತಕ್ಕದ್ದು. ನಂತರ ಬಂದ ಟೆಂಡರ್ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

13) ಯಾವುದೇ ಕಾರಣಗಳನ್ನು ನೀಡದೇ, ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಟೆಂಡರ್ ಸ್ವೀಕರಿಸುವ ಸಮರ್ಥ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. ಇವರ ನಿರ್ಣಯವೇ ಅಂತಿಮವಾದದ್ದು.

14) ಟೆಂಡರ್‌ಗಳನ್ನು ಉಪಕಾರ್ಯದರ್ಶಿಯವರ ಕೊಠಡಿ ಸಂಖ್ಯೆ: 23, ವಿಧಾನಸೌಧ, ಬೆಂಗಳೂರು ಇಲ್ಲಿ ಟೆಂಡರ್‌ದಾರರ ಸಮ್ಮುಖದಲ್ಲಿ ದಿನಾಂಕ: 31–07–2008ರ ಮಧ್ಯಾಹ್ನ 4–00 ಗಂಟೆಗೆ ತೆರೆಯಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಎಸ್. ಮಂಜುನಾಥ್

ಪಿ.ಆರ್. 393

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಟೆಂಡರ್ ಅಧಿಸೂಚನೆ

ಸಂಖ್ಯೆ: ಸಿಆಸುಇ 14 ಡಿಎಸ್‌ಡಬ್ಲ್ಯೂ 2006, ದಿನಾಂಕ: 05ನೇ ಜುಲೈ 2008

ವಿಕಾಸಸೌಧದ 3ನೇ ಮಹಡಿಯಲ್ಲಿ ಸಚಿವಾಲಯದ ಉನ್ನತಾಧಿಕಾರಿಗಳ ಉಪಾಹಾರ ಮಂದಿರವನ್ನು ಮೂರು ವರ್ಷದ ಅವಧಿಗೆ ನಡೆಸುವ ಬಗ್ಗೆ ಪ್ರಸಿದ್ಧ ಹೋಟೆಲ್ ಸಂಸ್ಥೆಗಳು / ವ್ಯಕ್ತಿಗಳಿಂದ ಟೆಂಡರ್‌ನ್ನು ಕರೆಯಲಾಗಿದೆ.

1) ಟೆಂಡರ್ ನಮೂನೆಯ ದರ ರೂ.250 + ಶೇ. 12.5 ಮಾರಾಟ ತೆರಿಗೆ, ಈ ರೀತಿ ಒಟ್ಟು ರೂ. 281/–ಕ್ಕೆ ಬ್ಯಾಂಕ್ ಡ್ರಾಫ್ಟ್‌ನ್ನು "ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ), ಬೆಂಗಳೂರು" ಇವರ ಹೆಸರಿಗೆ ಪಡೆದುಕೊಂಡು, ಟೆಂಡರ್ ನಮೂನೆಯನ್ನು "ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಕಾರ್ಯಕಾರಿ), ಕೊಠಡಿ ಸಂಖ್ಯೆ: 23, ನೆಲಮಹಡಿ, ವಿಧಾನಸೌಧ, ಬೆಂಗಳೂರು", ಇವರಿಂದ ಪಡೆಯಬಹುದಾಗಿದೆ.

2) ವಿಕಾಸಸೌಧ ಕಟ್ಟಡದ 3ನೇ ಮಹಡಿಯಲ್ಲಿ ಉನ್ನತಾಧಿಕಾರಿಗಳ ಉಪಾಹಾರ ಮಂದಿರದ ಒಟ್ಟು ವಿಸ್ತೀರ್ಣ ಸುಮಾರು 161 ಚದರ ಮೀಟರ್‌ಗಳು. ವಿಕಾಸಸೌಧ ಉಪಾಹಾರ ಮಂದಿರದಲ್ಲಿ ಅಡುಗೆ ಮಾಡಲು ಅವಕಾಶ ಇರುವುದಿಲ್ಲ. ತಿಂಡಿ ಪದಾರ್ಥಗಳನ್ನು ಬೇರೆ ಕಡೆ ತಯಾರಿಸಿ ಇಲ್ಲಿ ಸರಬರಾಜು ಮಾಡುವುದು. ಟೆಂಡರ್‌ದಾರರು ಕಚೇರಿ ದಿನ ಮತ್ತು ವೇಳೆಯಲ್ಲಿ ವಿಕಾಸಸೌಧ ಕಟ್ಟಡದ ಉಪಾಹಾರ ಮಂದಿರದ ಸ್ಥಳ ಪರಿವೀಕ್ಷಣೆ ಮಾಡಬಹುದು.

3) ಉಪಾಹಾರ ಮಂದಿರವನ್ನು ನಡೆಸಲು ಟೆಂಡರ್ ಸಲ್ಲಿಸುವವರು ರೂ. 15,000/– ಮುಂಗಡ ಠೇವಣಿ (ಇ.ಎಂ.ಡಿ.) ಹಣಕ್ಕೆ ಬ್ಯಾಂಕ್ ಡ್ರಾಫ್ಟ್‌ನ್ನು "ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ), ಬೆಂಗಳೂರು" ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು.

4) ಮುಂಗಡ ಠೇವಣಿ ಹಣದ ಸಂಬಂಧ ಬ್ಯಾಂಕ್ ಡ್ರಾಫ್ಟ್‌ನ್ನು ಟೆಂಡರ್ ಜೊತೆಗೆ ಸಲ್ಲಿಸದಿದ್ದಲ್ಲಿ, ಟೆಂಡರನ್ನು ತಿರಸ್ಕರಿಸಲಾಗುವುದು.

5) ಸದರಿ ಟೆಂಡರ್‌ನ ಮೇಲೆ "ಕರ್ನಾಟಕ ಸರ್ಕಾರ ಸಚಿವಾಲಯದ ವಿಕಾಸಸೌಧದಲ್ಲಿ ಉನ್ನತಾಧಿಕಾರಿಗಳ ಉಪಾಹಾರ ಮಂದಿರ ನಡೆಸಲು ಟೆಂಡರ್" ಎಂದು ನಮೂದಿಸಿರತಕ್ಕದ್ದು.

6) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 06–08–2008ರ ಮಧ್ಯಾಹ್ನ 3–00 ಗಂಟೆಯವರೆಗೆ. **ಮೊಹರು ಮಾಡಿದ ಲಕೋಟೆಗಳಲ್ಲಿ** ಟೆಂಡರನ್ನು ಸರ್ಕಾರದ ಉಪಕಾರ್ಯದರ್ಶಿ, ಸಿಆಸುಇ (ಕಾರ್ಯಕಾರಿ), ಕೊಠಡಿ ಸಂಖ್ಯೆ: 23, ವಿಧಾನಸೌಧ, ಬೆಂಗಳೂರು, ಇವರಿಗೆ ಸಲ್ಲಿಸತಕ್ಕದ್ದು.

7) 08–08–2008ರಂದು ಮಧ್ಯಾಹ್ನ 4–00 ಗಂಟೆಗೆ ಸರಿಯಾಗಿ ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ (ಕಾರ್ಯಕಾರಿ), ಇವರ ಕೊಠಡಿಯಲ್ಲಿ (ಕೊಠಡಿ ಸಂಖ್ಯೆ: 23, ವಿಧಾನಸೌಧ) ಟೆಂಡರ್‌ಗಳನ್ನು ತೆರೆಯಲಾಗುವುದು. ಟೆಂಡರ್ ತೆರೆಯುವ ದಿನ ಸಾರ್ವತ್ರಿಕ ರಜಾ ದಿನವಾದಲ್ಲಿ ಟೆಂಡರ್‌ನ್ನು ಮುಂದಿನ ಕಚೇರಿ ದಿನದಂದು ಅದೇ ವೇಳೆ ಮತ್ತು ಸ್ಥಳದಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ತೆರೆಯುವ ಸಮಯದಲ್ಲಿ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿ ಹಾಜರಿರಬಹುದು.

8) ಈ ಉಪಾಹಾರ ಮಂದಿರವನ್ನು ಆದೇಶ ಹೊರಡಿಸಿದ ದಿನಾಂಕದಿಂದ 3 (ಮೂರು) ವರ್ಷದ ಅವಧಿಗೆ ನಡೆಸಲು ಅನುಮತಿ ನೀಡಲಾಗುವುದು. ಯಾವುದೇ ಹಂತದಲ್ಲೂ 30 ದಿನಗಳ ನೋಟೀಸ್ ನೀಡುವ ಮೂಲಕ ಗುತ್ತಿಗೆಯನ್ನು ರದ್ದುಗೊಳಿಸುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.
9) ಟೆಂಡರ್‌ದಾರರು ತಮ್ಮ ಟೆಂಡರ್‌ಗಳಲ್ಲಿ ಪೂರ್ಣ ಹೆಸರಿನೊಂದಿಗೆ ಸಹಿ ಹಾಕಿರಬೇಕು. ಅದು ಒಂದು ಸಂಸ್ಥೆಯ ಪರವಾಗಿ ಹಾಕಿದ್ದಲ್ಲಿ, ವ್ಯವಸ್ಥಾಪಕ ಪಾಲುದಾರನ ಹೆಸರಿನೊಂದಿಗೆ ಸಹಿ ಹಾಕಿರಬೇಕು.
10) ಪ್ರತಿಯೊಬ್ಬ ಟೆಂಡರುದಾರನು ತನ್ನ ವಾಸ ಸ್ಥಳ, ಅಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆಯನ್ನು ಸ್ಪಷ್ಟವಾಗಿ ಟೆಂಡರ್‌ನಲ್ಲಿ ನಮೂದಿಸತಕ್ಕದ್ದು.
11) ಅಯಶಸ್ವಿ ಟೆಂಡರ್‌ದಾರರ ಮುಂಗಡ ಠೇವಣಿ ಹಣವನ್ನು ಬಡ್ಡಿರಹಿತವಾಗಿ ಹಿಂದಿರುಗಿಸಲಾಗುವುದು.
12) ಯಶಸ್ವಿ ಟೆಂಡರ್‌ದಾರರ ಮುಂಗಡ ಹಣವನ್ನು ಭದ್ರತಾ ಠೇವಣಿಯನ್ನಾಗಿ ಪರಿಗಣಿಸಿ ಸರ್ಕಾರಿ ಲೆಕ್ಕಕ್ಕೆ ಜಮಾ ಮಾಡಲಾಗುವುದು. ಟೆಂಡರ್ ಅವಧಿ ಮುಗಿದ ನಂತರ ಸರ್ಕಾರಕ್ಕೆ ಟೆಂಡರುದಾರರಿಂದ ಯಾವುದೇ ಬಾಕಿ ಇಲ್ಲದಿದ್ದಲ್ಲಿ, ಭದ್ರತಾ ಠೇವಣಿಯನ್ನು ಬಡ್ಡಿರಹಿತವಾಗಿ ಹಿಂದಿರುಗಿಸಲಾಗುವುದು.
13) ಕರ್ನಾಟಕ ಸರ್ಕಾರ ಸಚಿವಾಲಯದ ಉನ್ನತಾಧಿಕಾರಿಗಳಿಗೆ ಸಂಬಂಧಿಸಿದಂತೆ, ತಿಂಡಿ–ತಿನಿಸು, ಕಾಫಿ–ಟೀ ಇತ್ಯಾದಿಗಳಿಗೆ ಯಶಸ್ವಿ ಟೆಂಡರ್‌ದಾರರೇ ಬೆಲೆಯನ್ನು ನಿಗದಿಪಡಿಸಬಹುದಾಗಿದೆ.
14) ಈ ಉಪಾಹಾರ ಮಂದಿರಕ್ಕೆ ಕನಿಷ್ಟ ಮಾಸಿಕ ಬಾಡಿಗೆ ರೂ.15,000–00 (ರೂಪಾಯಿ ಹದಿನೈದು ಸಾವಿರ ಮಾತ್ರ). ಅದಕ್ಕಿಂತ ಕಡಿಮೆ ಬಾಡಿಗೆ ನಮೂದಿಸಿದಲ್ಲಿ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.
15) ಟೆಂಡರ್‌ದಾರರು 2007–08ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ಪಾಲಿಕೆ/ನಗರ ಸಭೆ ಮತ್ತು ಕಾರ್ಮಿಕ ಇಲಾಖೆ ಇವರಿಂದ ಪಡೆದಿರುವ ಪ್ರಮಾಣಪತ್ರ ಹಾಗೂ ಉಪಾಹಾರ ಮಂದಿರದ ನೌಕರರಿಗೆ ಸಂಬಂಧಿಸಿದಂತೆ 2007–08ನೇ ಸಾಲಿನಲ್ಲಿ ಇ.ಎಸ್.ಐ ಮತ್ತು ಪ್ರಾವಿಡೆಂಟ್ ಫಂಡ್‌ನ್ನು ಪಾವತಿಸಿರುವ ರಶೀದಿ ಇತ್ಯಾದಿ ಅವಶ್ಯಕ ದೃಢೀಕೃತ ದಾಖಲೆಗಳನ್ನು ಲಗತ್ತಿಸಿರತಕ್ಕದ್ದು.
16) ಗೊತ್ತುಪಡಿಸಿದ ಅರ್ಜಿ ನಮೂನೆಯಲ್ಲಿ ಹಾಗೂ ನಿಗದಿತ ದಿನಾಂಕ ಮತ್ತು ಸಮಯದೊಳಗೆ ಸಲ್ಲಿಸದೇ ಇರುವ ಟೆಂಡರನ್ನು ತಿರಸ್ಕರಿಸಲಾಗುವುದು.
17) ದಿನಾಂಕ: 31–07–2008ರ ಮಧ್ಯಾಹ್ನ 3–00 ಗಂಟೆಯವರೆಗೆ ಮಾತ್ರ ಈ ಟೆಂಡರ್ ನಮೂನೆಯನ್ನು ಮಾರಾಟ ಮಾಡಲಾಗುವುದು.
18) ಗೊತ್ತುಪಡಿಸಿದ ನಮೂನೆಯ ನಿಗದಿತ ಪಟ್ಟಿಯಲ್ಲಿನ ಯಾವುದೇ ಮಾರ್ಪಾಡುಗಳನ್ನು ಮಾಡಿರುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು.
19) ಯಶಸ್ವಿ ಟೆಂಡರ್‌ದಾರರು ಕರಾರು ಒಪ್ಪಂದ ಪತ್ರವನ್ನು ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವಾರದೊಳಗೆ ನಿಗದಿತ ಮೌಲ್ಯದ ಛಾಪಾ ಕಾಗದದಲ್ಲಿ ಸಹಿ ಹಾಕಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಈ ಅವಧಿಯೊಳಗೆ ನಿಗದಿತ ಕರಾರು ಒಪ್ಪಂದ ಪತ್ರಕ್ಕೆ ಸಹಿ ಹಾಕಿ ಸಲ್ಲಿಸಲು ವಿಫಲರಾದಲ್ಲಿ, ಗುತ್ತಿಗೆಯನ್ನು ರದ್ದುಗೊಳಿಸಿ, ಅವರು ಸಲ್ಲಿಸಿರುವ ಮುಂಗಡ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
20) ಎರಡು ವರ್ಷಗಳ ಕಾಲ ಪ್ರಾಮುಖ್ಯತೆ ಪಡೆದಿರುವ ಉಪಾಹಾರ ಮಂದಿರವನ್ನು ನಡೆಸಿರುವ ಅನುಭವ ಇದ್ದು, ವಾರ್ಷಿಕ ವಹಿವಾಟು (Annual turnover) ರೂ.5.00 ಲಕ್ಷ ಮೀರಿರಬೇಕು ಮತ್ತು ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆ ಪಾವತಿ ಮಾಡಿರುವಂತಹ ವ್ಯಕ್ತಿಗಳು ಹಾಗೂ ಸಂಸ್ಥೆಗಳು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಈ ಬಗ್ಗೆ ಟೆಂಡರ್‌ದಾರರು ದಾಖಲೆಗಳೊಂದಿಗೆ ಸಂಪೂರ್ಣ ವಿವರ ನೀಡುವುದು.
21) ಉಪಾಹಾರ ಮಂದಿರವನ್ನು ನಡೆಸುವ ಸ್ಥಳವನ್ನು ಸ್ವಚ್ಛವಾಗಿ ಇಡುವುದಲ್ಲದೇ, ಸೋಂಕು ರೋಗ, ಇಲಿ, ನೊಣ, ಸೊಳ್ಳೆ ಇತ್ಯಾದಿ ಸಮಸ್ಯೆಗಳು ಉಂಟಾಗದಂತೆ ದಿನಂಪ್ರತಿ ಔಷಧಿಯನ್ನು ಸಿಂಪಡಿಸತಕ್ಕದ್ದು.
22) ಈ ಉಪಾಹಾರ ಮಂದಿರಗಳಲ್ಲಿ ಆರೋಗ್ಯಕರವಾದ ಮತ್ತು ಶುಚಿ–ರುಚಿಯಾದ ತಿಂಡಿ–ತಿನಿಸುಗಳನ್ನು ಮಾತ್ರ ಒದಗಿಸತಕ್ಕದ್ದು.
23) ಇಲ್ಲಿ ನೀಡುವ ತಿಂಡಿ–ತಿನಿಸು, ಆಹಾರ ಪದಾರ್ಥಗಳನ್ನು ತಿಂದು ಗ್ರಾಹಕರು ಅಸ್ವಸ್ಥರಾದರೆ ಅದರಿಂದ ಉಂಟಾಗುವ ಪರಿಣಾಮಗಳಿಗೆ ಉಪಾಹಾರ ಮಂದಿರದ ಗುತ್ತಿಗೆದಾರರೇ ಸಂಪೂರ್ಣ ಜವಾಬ್ದಾರರು.
24) ಉಪಾಹಾರ ಮಂದಿರ ಮತ್ತು ಅದರ ಆವರಣದಲ್ಲಿ ಇನ್ನಾವುದೇ ವಾಣಿಜ್ಯ ಚಟುವಟಿಕೆಗಳನ್ನು ನಡೆಸುವಂತಿಲ್ಲ.
25) ಉಪಾಹಾರ ಮಂದಿರದ ನೀರು ಮತ್ತು ವಿದ್ಯುತ್ ಬಿಲ್ಲುಗಳ ಸಂಪೂರ್ಣ ವೆಚ್ಚವನ್ನು ಯಶಸ್ವಿ ಗುತ್ತಿಗೆದಾರರೇ ಪಾವತಿ ಮಾಡತಕ್ಕದ್ದು.

26) ಯಶಸ್ವಿ ಗುತ್ತಿಗೆದಾರರು ಯಾವ ಕಾರಣಕ್ಕೂ ತಾವು ಗುತ್ತಿಗೆ ಪಡೆದ ಉಪಾಹಾರ ಮಂದಿರವನ್ನು ಉಪಗುತ್ತಿಗೆ ನೀಡಬಾರದು.

27) ಈ ಉಪಾಹಾರ ಮಂದಿರವನ್ನು ಕಚೇರಿ ಕೆಲಸದ ದಿನಗಳಲ್ಲಿ ಬೆಳಿಗ್ಗೆ 9–00 ಗಂಟೆಯಿಂದ ಸಂಜೆ 6–30 ಗಂಟೆಯವರೆಗೆ ಮಾತ್ರ ನಡೆಸತಕ್ಕದ್ದು ಮತ್ತು ಸಾರ್ವಜನಿಕ ರಜಾ ದಿನಗಳಲ್ಲಿ ಉಪಾಹಾರ ಮಂದಿರವನ್ನು ನಡೆಸುವಂತಿಲ್ಲ. ಅಡುಗೆ ಕೆಲಸ ನಿರ್ವಹಿಸುವ ಕ್ಯಾಂಟೀನ್ ನೌಕರರು/ಸಿಬ್ಬಂದಿ ವರ್ಗದವರು ಬೆಳಿಗ್ಗೆ 7–00 ಗಂಟೆಯಿಂದ ಸಂಜೆ 7–00 ಗಂಟೆಯವರೆಗೆ ಮಾತ್ರ ಕ್ಯಾಂಟೀನ್‌ನಲ್ಲಿ ಕರ್ತವ್ಯ ನಿರ್ವಹಿಸಬಹುದಾಗಿದೆ. ಇವರುಗಳು ಉಳಿದ ವೇಳೆಯಲ್ಲಿ ಇಲ್ಲಿ ತಂಗಲು ಅವಕಾಶವಿರುವುದಿಲ್ಲ. ಈ ಉಪಾಹಾರ ಮಂದಿರಕ್ಕೆ ಸಾರ್ವಜನಿಕರ ಪ್ರವೇಶವು ಸರ್ಕಾರವು ಕಾಲಾನುಕಾಲದಲ್ಲಿ ನಿಗಧಿಪಡಿಸುವ ನಿರ್ಬಂಧಕ್ಕೆ ಒಳಪಟ್ಟಿರುತ್ತದೆ.

28) ಯಾವುದೇ ವ್ಯಾಜ್ಯ ಉಂಟಾದಲ್ಲಿ, ಅದನ್ನು ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ನ್ಯಾಯಾಲಯಗಳಿಗೆ ಮಾತ್ರ ಸೀಮಿತಗೊಂಡಂತೆ ಬಗೆಹರಿಸಿಕೊಳ್ಳತಕ್ಕದ್ದು.

29) ಯಾವುದೇ ಕಾರಣವನ್ನು ನೀಡದೆ, ಯಾವುದೇ ಅಥವಾ ಎಲ್ಲಾ ಟೆಂಡರುಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಟೆಂಡರ್ ಅಂಗೀಕರಿಸುವ ಸಕ್ಷಮ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. ಇವರ ನಿರ್ಣಯವೇ ಅಂತಿಮವಾದದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಎಸ್. ಮಂಜುನಾಥ್

ಪಿ.ಆರ್. 400

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ)

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ

ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲು, ಮೈಸೂರು ರಸ್ತೆ, ಕೆಂಚೇನಹಳ್ಳಿ,

ಆರ್.ವಿ. ಕಾಲೇಜು ಅಂಚೆ, ಬೆಂಗಳೂರು–560 059

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಪತ್ರ ಸಂಖ್ಯೆ: ಡಿ.ಪಿ.ಎಸ್/ಪಿಯುಆರ್/ಸಿ13–02/08–09, ದಿನಾಂಕ: 10ನೇ ಜುಲೈ 2008

ದಿನಾಂಕ:15.8.2008 ರಿಂದ 14.8.2009ರ ಅವಧಿಗೆ ಸರ್ಕಾರಿ ಕೇಂದ್ರ ಮುದ್ರಣಾಲಯ ಹಾಗೂ ಅದರ ಅಧೀನ ಕಛೇರಿಗಳು, ಬೆಂಗಳೂರು; ಸರ್ಕಾರಿ ಮುದ್ರಣಾಲಯ, ಹೈಕೋರ್ಟ್ ಶಾಖೆ, ಬೆಂಗಳೂರು; ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಶಾಖೆ, ಬೆಂಗಳೂರು; ಸರ್ಕಾರಿ ಮುದ್ರಣಾಲಯ, ಮುದ್ರಣ ಶಾಲೆ, ಬೆಂಗಳೂರು; ಮತ್ತು ಸರ್ಕಾರಿ ಹೊರವಲಯ ಮುದ್ರಣಾಲಯ, ಬೆಂಗಳೂರು; ಹಾಗೂ ಸರ್ಕಾರಿ ವಿಭಾಗೀಯ ಮುದ್ರಣಾಲಯಗಳಾದ ಧಾರವಾಡ, ಗುಲ್ಬರ್ಗಾ ಮತ್ತು ಮೈಸೂರು; ಹಾಗೂ ಸರ್ಕಾರಿ ಜಿಲ್ಲಾ ಮುದ್ರಣಾಲಯಗಳಾದ ತುಮಕೂರು, ಕೋಲಾರ, ಶಿವಮೊಗ್ಗ, ಮಂಗಳೂರು ಮತ್ತು ಮಡಿಕೇರಿ, ಇಲ್ಲಿ ಶೇಖರಣೆಯಾಗುವ ಬಿಳಿ ಜೆಲ್ಲಿ ಕಟ್‌ಪೀಸ್ ಪೇಪರ್, ರೀಲ್ ಪೇಪರ್ ವೇಸ್ಟೇಜ್, ಹಳೆ ಹಾಗೂ ಅನುಪಯುಕ್ತ ಗೆಜೆಟ್/ನಮೂನೆಗಳು/ಪುಸ್ತಕಗಳು, ಇತ್ಯಾದಿಗಳನ್ನು ವಿಲೇವಾರಿ ಮಾಡಲು ಅರ್ಹ ಸಂಸ್ಥೆಗಳಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ದರ ರೂ 1000/– + ವ್ಯಾಟ್ ರೂ 125/– ನ್ನು ನಗದು ರೂಪದಲ್ಲಿ ಪಾವತಿಸಿ ದಿನಾಂಕ: 8.8.2008 ರ ಮಧ್ಯಾಹ್ನ 4.30 ಗಂಟೆಯೊಳಗೆ ಟೆಂಡರ್ ನಮೂನೆಗಳನ್ನು ಮೇಲಿನ ವಿಳಾಸದಲ್ಲಿ ಪಡೆಯಬಹುದಾಗಿದೆ. ಒಟ್ಟಾರೆ ರೂ. 2,50,000/– ಗಳಿಗೆ ಇ.ಎಂ.ಡಿ. ನಿಗದಿಪಡಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಪಿ.ಆರ್. 403

ನಿರ್ದೇಶಕರು

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,

ಮಂಗಳೂರು ವಿಭಾಗ, ಮಂಗಳೂರು

ಟೆಂಡರ್ ಪ್ರಕಟಣೆ

ಸಂಖ್ಯೆ:8:ಜಿಎನ್‌ಎಲ್:ಟಿ.ಎನ್‌ಡಿ(4):2008–09:ಜೆಇ.2, ದಿನಾಂಕ: 28ನೇ ಜೂನ್ 2008

ಈ ಕೆಳಕಂಡ ಕಾಮಗಾರಿಗಳಿಗೆ ಪ್ರತ್ಯೇಕ ಮೊಹರಾದ ಟೆಂಡರುಗಳನ್ನು ದ್ವಿಪ್ರತಿಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲಾದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕೆಲಸದ ಹೆಸರನ್ನು ಮೊಹರಾದ ಲಕೋಟೆಯ ಮೇಲೆ ನಮೂದಿಸಿದ ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಮಂಗಳೂರು ವಿಭಾಗ, ಮಂಗಳೂರು ಇವರು ದಿನಾಂಕ: 30.07.2008ರಂದು ಸಂಜೆ:4.00 ಗಂಟೆಯವರೆಗೆ ಟೆಂಡರುಗಳನ್ನು ಸ್ವೀಕರಿಸುವರು.

ಖಾಲಿ ಟೆಂಡರು ಫಾರಂಗಳ ಅರ್ಜಿಗಳನ್ನು ನಿಗದಿಪಡಿಸಿದ ಬೆಲೆಯೊಂದಿಗೆ (ಇದನ್ನು ಹಿಂತಿರುಗಿಸುವುದಿಲ್ಲ) ಮತ್ತು ನಿಗದಿಪಡಿಸಿದ ಇ.ಎಂ.ಡಿಯೊಂದಿಗೆ ದಿನಾಂಕ: 29.07.2008ರ ವರೆಗೆ ಕೆಲಸದ ಎಲ್ಲಾ ದಿನಗಳಂದು ಕಛೇರಿ ವೇಳೆಯಲ್ಲಿ ಸ್ವೀಕರಿಸಲಾಗುವುದು. ಗುತ್ತಿಗೆದಾರರು ರಿಜಿಸ್ಟ್ರೇಷನ್ ಸರ್ಟಿಫೈಡ್ ಪ್ರತಿ ಹಾಗೂ ಈ ತರಹದ ಕಾಮಗಾರಿಗಳನ್ನು ಕೈಗೊಂಡ ಬಗ್ಗೆ ಅನುಭವ ಪತ್ರವನ್ನು ಸಲ್ಲಿಸತಕ್ಕದ್ದು. ಖಾಲಿ ಟೆಂಡರು ಫಾರಂಗಳನ್ನು ದಿನಾಂಕ: 29.07.2008ರ ಸಂಜೆ:5.30ರ ತನಕ ನೀಡಲಾಗುವುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆದಾರರ ಅರ್ಹತೆ	ಇ.ಎಂ.ಡಿ ಠೇವಣಿ (ರೂ.ಗಳಲ್ಲಿ)	ಟೆಂಡರು ಅವಧಿ (ಮಳೆಗಾಲ ಹೊರತುಪಡಿಸಿ)	ಟೆಂಡರು ನಮೂನೆ	ಟೆಂಡರು ಫಾರಂ ಬೆಲೆ (ರೂ.ಗಳಲ್ಲಿ)
1	**ಲೆಕ್ಕ ಶೀರ್ಷಿಕೆ 8443 ಶಾಸಕರ ನಿಧಿ**						
	1. ಸುಳ್ಯ ತಾಲ್ಲೂಕು ಬೈತಡ್ಕ – ಮಂಡಕೋಲು ರಸ್ತೆಯ ಕಿ.ಮೀ. 1.40 ರಿಂದ 3.80 ವರೆಗೆ ಅಗಲಗೊಳಿಸಿ ಅಭಿವೃದ್ಧಿಪಡಿಸುವುದು.	3.00	ಮೂರನೇ ದರ್ಜೆ ಮತ್ತು ಮೇಲ್ಪಟ್ಟು	8000.00	2 ತಿಂಗಳು	ದರವಾರು	1100.00
2	**ಲೆಕ್ಕ ಶೀರ್ಷಿಕೆ 8443 ಠೇವಣಿ ಕಾಮಗಾರಿ**						
	1. ಮಂಗಳೂರಿನ ಜಿಲ್ಲಾಧಿಕಾರಿಯವರ ಕಛೇರಿ ಸಂಕೀರ್ಣದ ಆವರಣದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ದ.ಕ. ಜಿಲ್ಲಾ ಕೇಂದ್ರ ಕಟ್ಟಡ ನಿರ್ಮಾಣ – ನೆಲ ಅಂತಸ್ತು ಒಂದನೇ ಹಂತ	4.75	ಮೂರನೇ ದರ್ಜೆ ಮತ್ತು ಮೇಲ್ಪಟ್ಟು	12000.00	6 ತಿಂಗಳು	ದರವಾರು	1100.00
	2. ಮಂಗಳೂರಿನ ಜಿಲ್ಲಾಧಿಕಾರಿಯವರ ಕಛೇರಿ ಸಂಕೀರ್ಣದ ಆವರಣದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ದ.ಕ. ಜಿಲ್ಲಾ ಕೇಂದ್ರ ಕಟ್ಟಡ ನಿರ್ಮಾಣ – ನೆಲ ಅಂತಸ್ತು ಎರಡನೇ ಹಂತ	8.05	ಮೂರನೇ ದರ್ಜೆ ಮತ್ತು ಮೇಲ್ಪಟ್ಟು	16000.00	6 ತಿಂಗಳು	ದರವಾರು	1650.00
3.	**ಲೆಕ್ಕ ಶೀರ್ಷಿಕೆ 4059 ಪ್ರಾದೇಶಿಕ ಸಾರಿಗೆ**						
	1. ಪುತ್ತೂರು ತಾಲ್ಲೂಕಿನ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಕಟ್ಟಡಕ್ಕೆ ನೀರು ಸರಬರಾಜು ಹಾಗೂ ನೈರ್ಮಲೀಕರಣ ವ್ಯವಸ್ಥೆ ಅಳವಡಿಸುವ ಕಾಮಗಾರಿ	9.10	ಮೂರನೇ ದರ್ಜೆ ಮತ್ತು ಮೇಲ್ಪಟ್ಟು	18000.00	4 ತಿಂಗಳು (ಮಳೆಗಾಲ ಸೇರಿ)	ದರವಾರು	1650.00

ಸೂಚನೆಗಳು:–

1. ಉದ್ದೇಶಿಸಿರುವ ಕಾಮಗಾರಿಯ ಶೇ. 30 ರಷ್ಟು ಮೊತ್ತದ ಇದೇ ತರಹದ ಕಾಮಗಾರಿಯನ್ನು ಕಳೆದ 5 ವರ್ಷಗಳ ಅವಧಿಯ ಒಂದು ಆರ್ಥಿಕ ವರ್ಷದಲ್ಲಿ ಪೂರೈಸಿರತಕ್ಕದ್ದು.
2. ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಯವರು ಹೊಂದಿರುತ್ತಾರೆ.
3. ಇ.ಎಂ.ಡಿ.ಯನ್ನು ಪ್ಲೆಜ್ಡ್ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್/ ರಾಷ್ಟ್ರೀಕೃತ ಯಾ ಶೆಡ್ಯೂಲ್ ಬ್ಯಾಂಕಿನಿಂದ ಪಡೆದ ಕಾಲ್ ಡಿಪೋಸಿಟ್ ರಶೀದಿ/ ಬ್ಯಾಂಕಿನ ನಿರಖು ಠೇವಣಿ ರೂಪದಲ್ಲಿ ಸಲ್ಲಿಸುವುದು. ನಿಗದಿಪಡಿಸಿದ ಮುಂಗಡ ಠೇವಣಿಯೊಂದಿಗೆ ಸಲ್ಲಿಸದಿರುವ ಟೆಂಡರನ್ನು ಪರಿಗಣಿಸುವುದಿಲ್ಲ.
4. ಗುತ್ತಿಗೆದಾರರು ಕೆಲಸವನ್ನು ನಿಗಧಿತ ಸಮಯದಲ್ಲಿ ಮಾಡಿ ಮುಗಿಸತಕ್ಕದ್ದು, ತಪ್ಪಿದಲ್ಲಿ ನಿಯಮದಂತೆ ದಂಡವನ್ನು ವಿಧಿಸಲಾಗುವುದು.
5. ಗುತ್ತಿಗೆದಾರರು ಟೆಂಡರು ಬಗ್ಗೆ ಅರ್ಜಿ ಸಲ್ಲಿಸುವಾಗ ಈ ತರಹದ ಕೆಲಸವನ್ನು ಕೈಗೊಂಡವರಾಗಿದ್ದು ಅನುಭವ ಪತ್ರವನ್ನು ಸಕ್ಷಮ ಅಧಿಕಾರಿಯವರಿಂದ ಪಡೆದು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.
6. ಕಾಮಗಾರಿಗೆ ಬೇಕಾದ ಸಿಮೆಂಟ್, ಮತ್ತು ಇನ್ನಿತರ ಎಲ್ಲಾ ಸಾಮಾಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳತಕ್ಕದ್ದು ಹಾಗೂ ಇದನ್ನು ಸಕ್ಷಮ ಅಧಿಕಾರಿಯವರಿಂದ ಪರೀಕ್ಷೆ ಪಡೆದು ಫಲಿತಾಂಶವು ಐ.ಎಸ್.ಐ. ಗುಣವನ್ನು ಖಚಿತಪಡಿಸಿ ಕೆಲಸಕ್ಕೆ ಉಪಯೋಗಿಸತಕ್ಕದ್ದು. ಈ ಅಂಶವನ್ನು ಗುತ್ತಿಗೆದಾರರು ಟೆಂಡರನ್ನು ಸಲ್ಲಿಸುವಾಗ ಗಮನಿಸುವುದು.

7. ಯಶಸ್ವಿ ಟೆಂಡರುದಾರರು ನಿರ್ವಹಿಸಿರುವ ಕಾಮಗಾರಿಯ ಮೊತ್ತ 1%ರಷ್ಟನ್ನು ಲೇಬರ್ ಸೆಸ್‌ನ್ನಾಗಿ ಸರಕಾರಿ ಆದೇಶ ಸಂ. ಯುಯಲ್‌ಡಿ:3:ಎಲ್ಇಡಿ 2006:ಬೆಂಗಳೂರು:ದಿನಾಂಕ:18.1.2007 ರಂತೆ ಪಾವತಿಸತಕ್ಕದ್ದು.

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ, ಬಂದರು, ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು.

ಪಿ.ಆರ್. 381

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು

ಟೆಂಡರ್ ಪ್ರಕಟಣೆ

ಸಂಖ್ಯೆ:8:ಜಿಎನ್‌ಎಲ್:ಟಿ.ಎನ್‌ಡಿ(5):2008–09:ಎಇ–1, ದಿನಾಂಕ: 10ನೇ ಜುಲೈ 2008

ಈ ಕೆಳಕಂಡ ಕಾಮಗಾರಿಗಳಿಗೆ ಪ್ರತ್ಯೇಕ ಮೊಹರಾದ ಟೆಂಡರುಗಳನ್ನು ದ್ವಿಪ್ರತಿಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲಾದ ಗುತ್ತಿಗೆದಾರರಿಂದ ಕೆಲಸದ ಹೆಸರನ್ನು ಮೊಹರಾದ ಲಕೋಟೆಯ ಮೇಲೆ ನಮೂದಿಸಿದ ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರು ದಿನಾಂಕ: 12.8.2008 ರಂದು ಸಂಜೆ:4.00 ಗಂಟೆಯವರೆಗೆ ಟೆಂಡರುಗಳನ್ನು ಸ್ವೀಕರಿಸುವರು.

ಖಾಲಿ ಟೆಂಡರು ಫಾರಂಗಳ ಅರ್ಜಿಗಳನ್ನು ನಿಗದಿಪಡಿಸಿದ ಬೆಲೆಯೊಂದಿಗೆ (ಇದನ್ನು ಹಿಂತಿರುಗಿಸುವುದಿಲ್ಲ) ಮತ್ತು ನಿಗದಿಪಡಿಸಿದ ಇ.ಎಂ.ಡಿಯೊಂದಿಗೆ ದಿನಾಂಕ: 11.08.2008ರ ವರೆಗೆ ಕೆಲಸದ ಎಲ್ಲಾ ದಿನಗಳಂದು ಕಛೇರಿ ವೇಳೆಯಲ್ಲಿ ಸ್ವೀಕರಿಸಲಾಗುವುದು. ಗುತ್ತಿಗೆದಾರರು ರಿಜಿಸ್ಟ್ರೇಷನ್ ಸರ್ಟಿಫೈಡ್ ಪ್ರತಿ ಹಾಗೂ ಈ ತರಹದ ಕಾಮಗಾರಿಗಳನ್ನು ಕೈಗೊಂಡ ಬಗ್ಗೆ ಅನುಭವ ಪತ್ರವನ್ನು ಸಲ್ಲಿಸತಕ್ಕದ್ದು. ಖಾಲಿ ಟೆಂಡರು ಫಾರಂಗಳನ್ನು ದಿನಾಂಕ: 11.08.2008ರ ಸಂಜೆ:5.30ರ ತನಕ ನೀಡಲಾಗುವುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆದಾರರ ಅರ್ಹತೆ	ಇ.ಎಂ.ಡಿ ಠೇವಣಿ (ರೂ.ಗಳಲ್ಲಿ)	ಟೆಂಡರು ಅವಧಿ (ಮಳೆಗಾಲ ಸೇರಿ)	ಟೆಂಡರು ನಮೂನೆ	ಟೆಂಡರು ಫಾರಂ ಬೆಲೆ (ರೂ.ಗಳಲ್ಲಿ)
1	**ನಬಾರ್ಡ್ ಆರ್.ಐ.ಡಿ.ಎಫ್ – 12ರ ಯೋಜನೆ**						
1.	ಮಂಗಳೂರು ತಾಲ್ಲೂಕು ಉಳ್ಳಾಲ ತೋಟದಿಂದ ಕುತ್ತೂರು ರಸ್ತೆ ಅಭಿವೃದ್ಧಿ ಕಿ.ಮೀ. 0.00 ರಿಂದ 0.67ರ ವರೆಗೆ (4ನೇ ಕರೆ)	27.00	1ನೇ ದರ್ಜೆ	27,000.00	6 ತಿಂಗಳು	ದರವಾರು	3,300.00
2	ಮಂಗಳೂರು ತಾಲ್ಲೂಕು ಮಂಜನಾಡಿ ಎಂಬಲ್ಲಿ ಉದುಮನೆ ಕಂಡಿಕೆ ರಸ್ತೆ ಅಭಿವೃದ್ಧಿ ಕಿ.ಮೀ. 0.00 ರಿಂದ 1.08ರ ವರೆಗೆ (4ನೇ ಕರೆ)	22.00	2ನೇ ದರ್ಜೆ ಮತ್ತು ಮೇಲ್ಪಟ್ಟು	22,000.00	6 ತಿಂಗಳು	ದರವಾರು	2,750.00
	ನಬಾರ್ಡ್ ಆರ್.ಐ.ಡಿ.ಎಫ್ – 13ರ ಯೋಜನೆ						
3.	ಮಂಗಳೂರು ತಾಲ್ಲೂಕಿನ ಮಾವಿನಕಟ್ಟೆ ಶ್ರೀನಿವಾಸ ಪುರ ಕಲ್ಲಮುಂಡ್ಕೂರು ರಸ್ತೆ ಅಭಿವೃದ್ಧಿ	47.35	1ನೇ ದರ್ಜೆ	47,350.00	6 ತಿಂಗಳು	ದರವಾರು	3,300.00
4.	ಮಂಗಳೂರು ತಾಲ್ಲೂಕಿನ ಮೂಡುಪೆರಾರು–ಬಾಲವಂಡಿ–ಕೈಕಾಣೆ ರಸ್ತೆಯ ಅಭಿವೃದ್ಧಿ (5ನೇ ಕರೆ)	49.60	1ನೇ ದರ್ಜೆ	49,600.00	6 ತಿಂಗಳು	ದರವಾರು	3300.00
5.	ಸುಳ್ಯ ತಾಲ್ಲೂಕಿನ ಮುರೂರು–ಮಂಡೆಕೋಲು ರಸ್ತೆ ಅಭಿವೃದ್ಧಿ (5ನೇ ಕರೆ)	50.00	1ನೇ ದರ್ಜೆ	50,000.00	6 ತಿಂಗಳು	ದರವಾರು	3300.00
6.	ಬೆಳ್ತಂಗಡಿ ತಾಲ್ಲೂಕಿನ ಸುಧೆಗುಂಡಿ–ಅರಸಿನಮಕ್ಕಿ ವಯಾ ಹತ್ಯಡ್ಕ–ಕುಂಟಲಪಲ್ಕೆ ರಸ್ತೆಯ ಅಭಿವೃದ್ಧಿ (5ನೇ ಕರೆ)	40.00	1ನೇ ದರ್ಜೆ	40,000.00	6 ತಿಂಗಳು	ದರವಾರು	3300.00

ಸೂಚನೆಗಳು:–

1. ಉದ್ದೇಶಿಸಿರುವ ಕಾಮಗಾರಿಯ ಶೇ. 30 ರಷ್ಟು ಮೊತ್ತದ ಇದೇ ತರಹದ ಕಾಮಗಾರಿಯನ್ನು ಕಳೆದ 5 ವರ್ಷಗಳ ಅವಧಿಯ ಒಂದು ಆರ್ಥಿಕ ವರ್ಷದಲ್ಲಿ ಪೂರೈಸಿರತಕ್ಕದ್ದು. ಈ ಕುರಿತು ಪ್ರಮಾಣಪತ್ರವನ್ನು ಸಕ್ಷಮ ಅಧಿಕಾರಿಯವರಿಂದ ಪಡೆದು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

2. ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಯವರು ಹೊಂದಿರುತ್ತಾರೆ.
3. ಇ.ಎಂ.ಡಿ.ಯನ್ನು ರಾಷ್ಟ್ರೀಕೃತ ಯಾ ಶೆಡ್ಯೂಲ್ ಬ್ಯಾಂಕಿನಿಂದ ಪಡೆದ ಬ್ಯಾಂಕ್ ಗ್ಯಾರಂಟಿ / ಎಫ್.ಡಿ.ಆರ್ / ಕಾಲ್‌ಡೆಪೋಸಿಟ್, ಡಿ.ಡಿ ಅಥವಾ ಎನ್.ಎಸ್.ಸಿ. ರೂಪದಲ್ಲಿ (ಎನ್‌ಎಸ್.ಸಿ.ಯನ್ನು ಕೆಳಸಹಿದಾರರ ಹೆಸರಿಗೆ ಪ್ಲೆಡ್ಜ್ ಮಾಡಿ) ಸಲ್ಲಿಸಬೇಕು. ನಿಗದಿಪಡಿಸಿದ ಮುಂಗಡ ಠೇವಣಿಯೊಂದಿಗೆ ಸಲ್ಲಿಸದ ಟೆಂಡರನ್ನು ಪರಿಗಣಿಸುವುದಿಲ್ಲ.
4. ಈ ಮೇಲಿನ ರಸ್ತೆ ಕಾಮಗಾರಿಗಳನ್ನು ಎಂಒಆರ್‌ಟಿಎಚ್ ಮಾದರಿ ಪ್ರಕಾರವಿರುವ ಪೇವರ್‌ಯುಕ್ತ ಹಾಟ್ ಮಿಕ್ಸ್ ಪ್ಲಾಂಟ್‌ನಿಂದ ಮಾತ್ರ ನಿರ್ವಹಿಸತಕ್ಕದ್ದು.
5. ಗುತ್ತಿಗೆದಾರರು ಕೆಲಸವನ್ನು ನಿಗಧಿತ ಸಮಯದಲ್ಲಿ ಮಾಡಿ ಮುಗಿಸತಕ್ಕದ್ದು, ತಪ್ಪಿದಲ್ಲಿ ನಿಯಮದಂತೆ ದಂಡವನ್ನು ವಿಧಿಸಲಾಗುವುದು.
6. ಗುತ್ತಿಗೆದಾರರು ಉಕ್ಕು ಸಿಮೆಂಟ್ ಡಾಂಬರು ಹಾಗೂ ಕಾಮಗಾರಿಗಳಿಗೆ ಬೇಕಾದ ಎಲ್ಲಾ ಸಾಮಾಗ್ರಿಗಳ ಸಂಗ್ರಹಕ್ಕೆ ಮತ್ತು ಯಂತ್ರೋಪಕರಣಗಳ ಹಾಗೂ ಸಾಧನ ಸಲಕರಣೆಗಳ ತಮ್ಮ ಸ್ವಂತ ವ್ಯವಸ್ಥೆ ಮಾಡಿಕೊಳ್ಳಬೇಕು. ಇದನ್ನು ಕೆಲಸಕ್ಕೆ ಉಪಯೋಗಿಸುವ ಮೊದಲು ಗುಣನಿಯಂತ್ರಣ ಪರೀಕ್ಷೆಗೆ ಒಳಪಡಿಸಿ, ಫಲಿತಾಂಶವು ಐ.ಎಸ್.ಎಸ್. (I.S.S.) ಗುಣಮಟ್ಟಕ್ಕೆ ಸರಿಹೊಂದುವಂತಿರಬೇಕು ಇದನ್ನು ಕೆಲಸದ ಎಲ್ಲಾ ಹಂತಗಳಲ್ಲಿ ಒದಗಿಸಬೇಕು.
7. ರಸ್ತೆ ಕಾಮಗಾರಿ ಪೂರ್ತಿಗೊಳಿಸಿದ ಬಳಿಕ ಎರಡು ವರ್ಷಗಳ ಕಾಲ ಯಾವುದೇ ದುರಸ್ತಿ ಕಾರ್ಯ ಬರಬಾರದು. ಈ ಮೇಲಿನಂತೆ ಪ್ರಕಟಿತ ಚಾಚು / ಚೈನೇಜುಗಳಲ್ಲಿ ಈ ಮೇಲಿನಂತೆ ದುರಸ್ತಿ ಅವಧಿಯಲ್ಲಿ (ಡಿಫೆಕ್ಟ್ ಲಯಾಬಿಲಿಟಿ ಅವಧಿ) ಯಾವುದಾದರೂ ದುರಸ್ತಿಬೇಕಾದರೆ ಗುತ್ತಿಗೆದಾರ / ವಾಣಿಜ್ಯ ಸಂಸ್ಥೆ ಅದನ್ನು ತಮ್ಮ ಸ್ವಂತ ಖರ್ಚಿನಲ್ಲಿ ನಿರ್ವಹಿಸಿಕೊಡಬೇಕು.
8. ಯಶಸ್ವಿ ಟೆಂಡರುದಾರರು ನಿರ್ವಹಿಸುವ ಕಾಮಗಾರಿಯ ಮೊತ್ತದ ಶೇ 1ರಷ್ಟನ್ನು ಲೇಬರ್ ಸೆಸ್‌ನ್ನಾಗಿ ಸರಕಾರಿ ಆದೇಶ ಸಂ. ಯಲ್‌ಡಿ:3:ಎಲ್‌ಇಡಿ 2006:ಬೆಂಗಳೂರು:ದಿನಾಂಕ:18.1.2007 ರಂತೆ ಕಡಿತಗೊಳಿಸಲಾಗುವುದು.
9. ಕೆಲಸದ ಕುರಿತಾದ ಯಾವುದೇ ಇತರ ವಿವರಗಳನ್ನು ಕಛೇರಿಯ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದಾಗಿದೆ. ಹಾಗೂ ಇಲಾಖೆಯ ವೆಬ್‌ಸೈಟ್ **"htpp://www.kpwd.gov.in"** ನಲ್ಲಿ ಸಂಪರ್ಕಿಸಬಹುದು.

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ, ಬಂದರು, ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು.

ಪಿ.ಆರ್. 396

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು

ಟೆಂಡರ್ ಪ್ರಕಟಣೆ

ಸಂಖ್ಯೆ:8:ಜಿಎನ್‌ಎಲ್:ಟಿ.ಎನ್‌ಡಿ(6):2008–09:ಎಇ–1, ದಿನಾಂಕ: 11ನೇ ಜುಲೈ 2008

ಈ ಕೆಳಕಂಡ ಕೆಲಸಕ್ಕೆ ಪ್ರತ್ಯೇಕ ಮೊಹರಾದ ಟೆಂಡರುಗಳನ್ನು ದ್ವಿಪ್ರತಿಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲಾದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕೆಲಸದ ಹೆಸರನ್ನು ಮೊಹರಾದ ಲಕೋಟೆಯ ಮೇಲೆ ನಮೂದಿಸಿದ ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರು ದಿನಾಂಕ: 13.8.2008 ರಂದು ಸಂಜೆ:4.00 ಗಂಟೆಯವರೆಗೆ ಟೆಂಡರುಗಳನ್ನು ಸ್ವೀಕರಿಸುವರು.

ಖಾಲಿ ಟೆಂಡರು ಫಾರಂಗಳ ಅರ್ಜಿಗಳನ್ನು ನಿಗದಿಪಡಿಸಿದ ಬೆಲೆಯೊಂದಿಗೆ (ಇದನ್ನು ಹಿಂತಿರುಗಿಸುವುದಿಲ್ಲ) ಮತ್ತು ನಿಗದಿಪಡಿಸಿದ ಇ.ಎಂ.ಡಿಯೊಂದಿಗೆ ದಿನಾಂಕ: 12.08.2008ರ ವರೆಗೆ ಕೆಲಸದ ಎಲ್ಲಾ ದಿನಗಳಂದು ಕಛೇರಿ ವೇಳೆಯಲ್ಲಿ ಸ್ವೀಕರಿಸಲಾಗುವುದು. ಗುತ್ತಿಗೆದಾರರು ರಿಜಿಸ್ಟ್ರೇಷನ್ ಸರ್ಟಿಫೈಡ್ ಪ್ರತಿ ಹಾಗೂ ಈ ತರಹದ ಕಾಮಗಾರಿಗಳನ್ನು ಕೈಗೊಂಡ ಬಗ್ಗೆ ಅನುಭವ ಪತ್ರವನ್ನು ಸಲ್ಲಿಸತಕ್ಕದ್ದು. ಖಾಲಿ ಟೆಂಡರು ಫಾರಂಗಳನ್ನು ದಿನಾಂಕ: 12.08.2008ರ ಸಂಜೆ:5.30ರ ತನಕ ನೀಡಲಾಗುವುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆದಾರರ ಅರ್ಹತೆ	ಇ.ಎಂ.ಡಿ ಠೇವಣಿ (ರೂ.ಗಳಲ್ಲಿ)	ಟೆಂಡರು ಅವಧಿ	ಟೆಂಡರು ನಮೂನೆ	ಟೆಂಡರು ಫಾರಂ ಬೆಲೆ (ರೂ.ಗಳಲ್ಲಿ)

I	**ಲೆಕ್ಕಶೀರ್ಷಿಕೆ 4202 – ಶಿಕ್ಷಣ**						
1.	ಸುಳ್ಯ ತಾಲ್ಲೂಕು ಬೆಳ್ಳಾರೆ ಸರಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡಕ್ಕೆ ಹೆಚ್ಚುವರಿ ಕೊಠಡಿ ರಚನೆ (2ನೇ ಕರೆ)	25.00	2ನೇ ದರ್ಜೆ ಮತ್ತು ಮೇಲ್ಪಟ್ಟು	25,000.00	8 ತಿಂಗಳು (ಮಳೆಗಾಲ ಹೊರತುಪಡಿಸಿ)	ದರವಾರು	3,300.00
II	**ಲೆಕ್ಕಶೀರ್ಷಿಕೆ 4216 – ವಸತಿಗೃಹ**						
1.	ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ವಸತಿಗೃಹದ ಆವರಣದಲ್ಲಿ 2 ವಸತಿಗೃಹಗಳ ನಿರ್ಮಾಣ (5ನೇ ಕರೆ)	15.00	2ನೇ ದರ್ಜೆ ಮತ್ತು ಮೇಲ್ಪಟ್ಟು	22,500.00	6 ತಿಂಗಳು (ಮಳೆಗಾಲ ಹೊರತುಪಡಿಸಿ	ದರವಾರು	2750.00
2.	ಮಂಗಳೂರಿನ ಬೋಂದೆಲ್‌ನಲ್ಲಿ 8 ವಸತಿಗೃಹಗಳ ನಿರ್ಮಾಣ (5ನೇ ಕರೆ)	40.00	1ನೇ ದರ್ಜೆ	40,000.00	8 ತಿಂಗಳು (ಮಳೆಗಾಲ ಹೊರತುಪಡಿಸಿ)	ದರವಾರು	3300.00
III.	**ಲೆಕ್ಕಶೀರ್ಷಿಕೆ 4202 – ಶಿಕ್ಷಣ – ನಬಾರ್ಡ್ – ಆರ್.ಐ.ಡಿ.ಎಫ್–12**						
1.	ಬೆಳ್ತಂಗಡಿ ತಾಲ್ಲೂಕಿನ ಪದ್ಮುಂಜ ಗ್ರಾಮದಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜು ಕಟ್ಟಡಕ್ಕೆ ಮೂರು ಹೆಚ್ಚುವರಿ ಕೊಠಡಿಗಳ ನಿರ್ಮಾಣ (2ನೇ ಕರೆ)	22.55	2ನೇ ದರ್ಜೆ ಮತ್ತು ಮೇಲ್ಪಟ್ಟು	22,550.00	8 ತಿಂಗಳು (ಮಳೆಗಾಲ ಹೊರತುಪಡಿಸಿ)	ದರವಾರು	3300.00
IV	**ಲೆಕ್ಕಶೀರ್ಷಿಕೆ 8443 ಠೇವಣಿ ಕಾಮಗಾರಿ**						
1.	ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ ಮಂಗಳೂರು ಇಲ್ಲಿಯ ಆವರಣದಲ್ಲಿರುವ ನೀರಿನ ಸಂಪ್ ಟ್ಯಾಂಕ್ ಸುತ್ತಲು ಫ್ಲಾಗಿಂಗ್ ಮತ್ತು ಚೈನ್ ಲಿಂಕ್ ಫೆನ್ಸಿಂಗ್ ಒದಗಿಸುವ ಕಾಮಗಾರಿ	2.30	3ನೇ ದರ್ಜೆ ಮತ್ತು ಮೇಲ್ಪಟ್ಟು	5,750.00	2 ತಿಂಗಳು (ಮಳೆಗಾಲ ಸೇರಿ)	ದರವಾರು	550.00

ಸೂಚನೆಗಳು:–

1. ಉದ್ದೇಶಿಸಿರುವ ಕಾಮಗಾರಿಯ ಶೇ. 30 ರಷ್ಟು ಮೊತ್ತದ ಇದೇ ತರಹದ ಕಾಮಗಾರಿಯನ್ನು ಕಳೆದ 5 ವರ್ಷಗಳ ಅವಧಿಯ ಒಂದು ಆರ್ಥಿಕ ವರ್ಷದಲ್ಲಿ ಪೂರೈಸಿರತಕ್ಕದ್ದು. ಈ ಕುರಿತು ಪ್ರಮಾಣಪತ್ರವನ್ನು ಸಕ್ಷಮ ಅಧಿಕಾರಿಗಳಿಂದ ಪಡೆದು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.
2. ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಯವರು ಹೊಂದಿರುತ್ತಾರೆ.
3. ಇ.ಎಂ.ಡಿ.ಯನ್ನು ಪ್ಲೆಜ್ ಮಾಡಿದ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್ / ರಾಷ್ಟ್ರೀಕೃತ ಯಾ ಶೆಡ್ಯೂಲ್ ಬ್ಯಾಂಕಿನಿಂದ ಪಡೆದ ಬ್ಯಾಂಕ್ ಗ್ಯಾರಂಟಿ / ಬ್ಯಾಂಕಿನ ಕಾಲ್ ಡಿಪೋಸಿಟ್ ರಶೀದಿ / ಬ್ಯಾಂಕಿನ ನಿರಖು ಠೇವಣಿ ರೂಪದಲ್ಲಿ ಸಲ್ಲಿಸುವುದು. ನಿಗದಿಪಡಿಸಿದ ಮುಂಗಡ ಠೇವಣಿಯೊಂದಿಗೆ ಸಲ್ಲಿಸದ ಟೆಂಡರನ್ನು ಪರಿಗಣಿಸುವುದಿಲ್ಲ.
4. ಗುತ್ತಿಗೆದಾರರು ಕೆಲಸವನ್ನು ನಿಗಧಿತ ಸಮಯದಲ್ಲಿ ಮಾಡಿ ಮುಗಿಸತಕ್ಕದ್ದು, ತಪ್ಪಿದಲ್ಲಿ ನಿಯಮದಂತೆ ದಂಡವನ್ನು ವಿಧಿಸಲಾಗುವುದು.
5. ಕಾಮಗಾರಿಗೆ ಬೇಕಾದ ಸಿಮೆಂಟ್, ಉಕ್ಕು ಮತ್ತು ಇನ್ನಿತರ ಎಲ್ಲಾ ಸಾಮಾಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳತಕ್ಕದ್ದು ಹಾಗೂ ಇದನ್ನು ಸಕ್ಷಮ ಅಧಿಕಾರಿಯವರಿಂದ ಪರೀಕ್ಷೆ ಪಡೆದು ಫಲಿತಾಂಶವು ಐ.ಎಸ್.ಐ. ಗುಣವನ್ನು ಖಚಿತಪಡಿಸಿ ಕೆಲಸಕ್ಕೆ ಉಪಯೋಗಿಸತಕ್ಕದ್ದು. ಈ ಅಂಶವನ್ನು ಗುತ್ತಿಗೆದಾರರು ಟೆಂಡರನ್ನು ಸಲ್ಲಿಸುವಾಗ ಗಮನಿಸುವುದು.
6. ಯಶಸ್ವಿ ಟೆಂಡರುದಾರರು ನಿರ್ವಹಿಸುವ ಕಾಮಗಾರಿಯ ಮೊತ್ತದ ಶೇ 1%ರಷ್ಟನ್ನು ಲೇಬರ್ ಸೆಸ್‌ನ್ನಾಗಿ ಸರಕಾರಿ ಆದೇಶ ಸಂ. ಯಲ್‌ಡಿ:3:ಎಲ್‌ಇಡಿ 2006:ಬೆಂಗಳೂರು:ದಿನಾಂಕ:18.1.2007 ರಂತೆ ಕಡಿತಗೊಳಿಸಲಾಗುವುದು.
7. ಕೆಲಸದ ಕುರಿತಾದ ಯಾವುದೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದಾಗಿದೆ. ಹಾಗೂ ಇಲಾಖೆಯ ವೆಬ್‌ಸೈಟ್ **"htpp://www.kpwd.gov.in"** ನಲ್ಲಿ ಸಂಪರ್ಕಿಸಬಹುದು.

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ, ಬಂದರು, ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು.

ಪಿ.ಆರ್. 397

FORM - IV
(See Rule 12)
NOTICE

It is hereby notified that the undersigned has changed his/her name from **GIREYYA** to **G.R. PATIL.**

P.D. 92 **GIREYYA**